ಇ) ಆರೂರು ಅಣೆಕಟ್ಟಿನ ದುರಸ್ತಿಗಾಗಿ ೧.೮೦ ಲಕ್ಷ ರೂ.ಗಳಿಗೆ ಅಂದಾಜು ತಯಾರು ಮಾಡ ಲಾಗಿದ್ದು, ಅನುದಾನದ ಕೊರತೆಯಿಂದಾಗಿ ರಿಪೇರಿ ಮಾಡಲು ಸಾಧ್ಯವಾಗಿಲ್ಲ. ಈ ಅಣೆಕಟ್ಟು ಮಂಗಳೂರು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ.

ಶ್ರೀ ಜಿ. ಎಸ್. ಆಚಾರ್ (ಶ್ರೀ ಬಸವರಾಜ್ ಅವರ ಪರವಾಗಿ).—ಬ್ರಹ್ಮಾವರ ಕ್ಷೇತ್ರದಲ್ಲಿ ೧೭ ವೆಂಟೆಡ್ ಡ್ಯಾಮ್‌ಗಳು ಇದ್ದು ಅವುಗಳಲ್ಲಿ ಅರ್ಧ ಭಾಗದಷ್ಟು ನಾಡುರಸ್ತೆಯಲ್ಲಿವೆ. ಇಡೀ ದಕ್ಷಿಣಕನ್ನಡ ಜಿಲ್ಲೆಯಲ್ಲಿಯೇ ವೆಂಟೆಡ್ ಡ್ಯಾಮ್‌ಗಳ ಪರಿಸ್ಥಿತಿ ಈ ರೀತಿಯಾಗಿದೆ. ಅವುಗಳನ್ನು ದುರಸ್ತಿ ಮಾಡು ವುದಕ್ಕೆ ಸರಕಾರದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ? ಜಿಲ್ಲಾಪರಿಷತ್‌ನವರಿಂದ ಈ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಇದಕ್ಕಾಗಿಯೇ ಒಂದು ವಿಶೇಷ ಯೋಜನೆಯನ್ನು ರೂಪಿಸಬೇಕು. ಅದೇ ರೀತಿಯಲ್ಲಿಪ್ರಶ್ನೆ (ಆ)ನಲ್ಲಿ ಆರೂರಿನಲ್ಲಿ ಇರುವ ಅಣೆಕಟ್ಟು ನಾಡುರಸ್ತೆಯಲ್ಲಿರುವುದರಿಂದ ರೈತರಿಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಅದಕ್ಕೆ ಉತ್ತರವಾಗಿ, ಅದು ಉಪ್ಪುನೀರು ತಡೆಗಟ್ಟು, ಕಿಂಡಿ ಅಣೆಕಟ್ಟು ಆಲ್ಲ. ಎಂದು ಉತ್ತರಿಸಿ ಪ್ರಶ್ನೆ ಹಾಕಿದ ಮಾನ್ಯ ಸದಸ್ಯರಿಗೆ ಇದರ ಡಿಫರೆನ್ಸ್ ಕೂಡ ಗೊತ್ತಿಲ್ಲ ಎಂಬ ರೀತಿ ಯಲ್ಲಿ ಉತ್ತರಿಸಿದ್ದಾರೆ. ಈ ಅಣೆಕಟ್ಟು ದುರಸ್ತಿಯಾಗದೆ ಅನೇಕ ದೃಷ್ಟಿಯಿಂದ ಹಲವಾರು ರೈತರಿಗೆ, ನೂರಾರು ಎಕರೆ ಜಮೀನಿಗೆ ಪ್ರವಾಸಾಯಕ್ಕೆ ತೊಂದರೆಯಾಗಿದೆ. ಇದರ ಬಗ್ಗೆ ಸರಕಾರದವರು ತಾತ್ಕಾಲಿಕವಾಗಿ ಏನು ಕ್ರಮವನ್ನು ಕೈಗೊಳ್ಳುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೆಂಟೆಡ್‌ಡ್ಯಾಮ್‌ಗಳು ಬಹಳ ಸಂಖ್ಯೆ ಯಲ್ಲಿದ್ದು ಅವುಗಳಲ್ಲಿ ಬಹುದೇಕ ನಾಡುರಸ್ತೆಯಲ್ಲಿವೆ. ಅದನ್ನು ದುರಸ್ತಿ ಮಾಡಿಸತಕ್ಕಂಥಾ ಕೆಲಸವು ಜಿಲ್ಲಾಪರಿಷತ್‌ಗೆ ಸೇರಿದ್ದು. ಆದರೆ ಜಿಲ್ಲಾಪರಿಷತ್‌ಗೆ ಕೊಟ್ಟಿರತಕ್ಕಂಥ ಅನುದಾನವು ಬಹಳ ಕಡಿಮೆ ಆಗಿದ್ದು ಅವುಗಳನ್ನು ನಿರೀಕ್ಷಿತಮಟ್ಟದಲ್ಲಿ ದುರಸ್ತಿ ಮಾಡುವುದಕ್ಕಾಗಲಿಲ್ಲ. ಎಂಬುವು ಸರ್ಕಾರದ ಗಮನಕ್ಕೆ ಬಂದಿದೆ. ಆದಕ್ಕೆ ಹೆಚ್ಚು ಹಣವನ್ನು ಕೊಡುವುದರ ಮೂಲಕ ದುರಸ್ತಿ ಮಾಡಿಸುವಂಥ ಪ್ರಸ್ತಾವನೆಯು ಸರಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು.—ಸಭೆಗೆ ಒಂದು ಎಕ್ಸ್‌ಪ್ಲೆನೇಶನ್ ಕೊಡಬೇಕಾಗಿದೆ. ಇವತ್ತು ಪ್ರಶ್ನೋತ್ತರ ೯.೨೩ಕ್ಕೆ ಪ್ರಾರಂಭವಾಯಿತು. ೧೦-೪೦ರವರೆಗೆ ಲಂಬಿತವಾಗಿದೆ. ಕಾರಣವೇನೆಂದರೆ, ಮಧ್ಯದಲ್ಲಿ ೨೦ ನಿಮಿಷ ಪಂಚಾಯತ್ ರಾಜ್ ಕನ್‌ಸ್ಟಿಟ್ಯೂಷನಲ್ ಕನ್‌ಸೆಪ್ಟ್ ಬಗ್ಗೆ ನಡೆದ ಚರ್ಚೆಯನ್ನೂ ಇದರಲ್ಲೇ ಸೇರಿಸಲಾಗಿದೆ. ಇನ್ನು ಮುಂದೆ ಹೆಲ್ಡ್ ಓವರ್ ಕ್ವೆಶ್ಚನ್ಸ್.

ತಡೆಹಿಡಿಯಲಾದ ಪ್ರಶ್ನೋತ್ತರಗಳು

ಬೆಳಗಾಂ ಜಿಲ್ಲಾಪರಿಷತ್‌ನವರ ಕಾಮಗಾರಿಗೆ ಕೊಟ್ಟಿರುವ ಅನುದಾನ

೨೪೦ (೮೭೭) ಶ್ರೀ ಕೆ. ಸಿ. ಮೊಡೆಕರ್ (ದೇಸಾಯಿ (ಬಾಗೇವಾಡಿ).—ಮಾನ್ಯ ಲೋಕೋಪ ಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಳಗಾಂ ಜಿಲ್ಲಾಪರಿಷತ್‌ನವರಿಗೆ ಕೆಳಕಂಡ ಕಾಮಗಾರಿಗಳಿಗೆ ೧೯೮೭-೮೮, ೧೯೮೮-೮೯ ಮತ್ತು ಮಾರ್ಚ್ ೯೦ರ ಕೊನೆಯವರೆವಿಗೆ ಕೊಟ್ಟಿರುವ ಅನುದಾನವೆಷ್ಟು ?

೧) ರಸ್ತೆ ಮತ್ತು ಸೇತುವೆಗಳು
೨) ಸಣ್ಣ ನೀರಾವರಿ ಕೆರೆಗಳು
೩) ಜನಾರೋಗ್ಯ ಮತ್ತು
೪) ಕಟ್ಟಡಗಳು.

ಶ್ರೀ ಜಿ. ಪುಟ್ಟಸ್ವಾಮಿಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಆ) ಬೆಳಗಾಂ ಜಿಲ್ಲಾ ಪರಿಷತ್ತಿನವರಿಗೆ ಆಯವ್ಯಯದಂತೆ ಒದಗಿಸಿರುವ ಯೋಜನಾ ಮತ್ತು ಯೋಜನೇತರ ಒಟ್ಟು ಅನುದಾನದ ವಿವರ ಕೆಳಕಂಡಂತೆ ಇದೆ;—

ಲಕ್ಷರೂಗಳಲ್ಲಿ

ಕ್ರಮ ಸಂಖ್ಯೆ	ಕಾಮಗಾರಿಗಳು	ವರ್ಷಗಳು		
		೧೯೮೭–೮೮	೧೯೮೮–೮೯	೧೯೮೯–೯೦
೧.	ರಸ್ತೆ ಮತ್ತು ಸೇತುವೆ	೨೨೮.೯೭	೨೩೯.೨೦	೨೪೩.೫೭
೨.	ಸಣ್ಣ ನೀರಾವರಿ ಕೆರೆಗಳು	೧೦೧.೧೬	೧೧೭.೯೩	೧೧೦.೯೬
೩.	ಜನಾರೋಗ್ಯ	೫೬೭.೦೪	೬೫೧.೮೩	೪೯೭.೮೫
೪.	ಕಟ್ಟಡಗಳು	೨೦೩ ೬೫	೨೭೯.೭೭	೨೮೦.೨೧

SRI K C. MODGEKAR DESI.—Sir, the Minor Irrigation scheme9 have not been taken up by the Zilla psrishad, in B lgaum taluka-About a few mini-water supply schemes declared, some are on the paper only, Sir, no major irrigation schemes are being implem ented in B lgaum taluks. whether the Government would provide sufficient amount to the Zilla parishad for such schemes ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಪ್ರಶ್ನೆ ಏನಿದೆಯೋ ಆ ಪ್ರಕಾರ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇನೆ ಅದರಲ್ಲೇ ರಸ್ತೆ ಸಣ್ಣ ನೀರಾವರಿ ಕೆರೆಗಳು ಜನಾರೋಗ್ಯ ಕಟ್ಟಡಗಳ ವಿವರಗಳನ್ನು ಐಟೆಮ್‌ವೈಸ್ ಕೊಟ್ಟಿದ್ದೇವೆ. ಅದರಲ್ಲಿ ಮೈನರ್ ಇರಿಗೇಷನ್‌ದೂ ಸೇರಿದೆ. For Minor Irrigation schemes, in 1987-88, we have provided Rs. 101 lakhs, in 1988-8n Rs. 117 lakhs and in 1989-90–Rs, 110 lakhs.

SRI K. C. MODGEKAR DESAI.—Sir, it is in respect of Minor Irrigation. I am asking the Hon. Minister in respect Major Irrigation.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ತಮ್ಮ ಕ್ವೆಶ್ಚನ್‌ನಲ್ಲಿ ಬರೀ ಸಣ್ಣ ನೀರಾವರಿ ಬಗ್ಗೆ ಮಾತ್ರ ಕೇಳಿರುವುದು. ಮೇಜರ್ ಇರಿಗೇಷನ್ ಬಗ್ಗೆ ಪ್ರಶ್ನೆ ಕೇಳಿಲ್ಲ.

ಸಂಬಾಬುಲ್ ಬೆಳೆ ಅಭಿವೃದ್ಧಿ ಯೋಜನೆ

೩೦೩(೧೦೬೧) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಅರಣ್ಯ ಮತ್ತು ಪಶ್ಚ ಸಂಗೋಪನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯದಲ್ಲಿ ಸುಬಾಬುಲ್ ಬೆಳೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಆಳವಡಿಸುವ ಒಟ್ಟು ವಿಸ್ತೀರ್ಣ ಹಾಗೂ ಸದರಿ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಖರ್ಚು ಮಾಡಿದ ಹಣ ?

ಆ) ಕಟ್ಟಡ ನಿರ್ಮಾಣ ಹಾಗೂ ಕಾವಲುಗಾರರಿಗಾಗಿ ಖರ್ಚು ಮಾಡಿದ ಒಟ್ಟು ಹಣ ?

ಇ) ಕಟಾವು ಮಾಡಿದ ಮತ್ತು ವಿತರಿಸಿದ ಮೇವಿನ (ಸುಬಾಬುಲ್) ಒಟ್ಟು ಮೊತ್ತವೆಷ್ಟು?

ಈ) ಈ ಯೋಜನೆ ಸಂಪೂರ್ಣವಾಗಿ ವಿಫಲವಾಗಿರುವುದು ನಿಜವೇ?

ಉ) ಹಾಗಿದ್ದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಿದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರವು ಜವಾಬ್ದಾರಿಯನ್ನು ನಿಗದಿಪಡಿಸಿದೆಯೇ?